ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು):

ಅ) ಸಣ್ಣ ಮತ್ತು ಮಧ್ಯಮ ನಗರ/ಪಟ್ಟಣ ಅಭಿವೃದ್ಧಿ ಯೋಜನೆಯಡಿ ಹಿರೇಕೆರೂರು ಪಟ್ಟಣದ ನೀರು ಸರಬರಾಜು ಯೋಜನೆಯನ್ನು ಈಗಾಗಲೇ ಕೈಗೊಂಡಿದ್ದು ಯೋಜನೆಗೆ ಸಂಬಂಧಿಸಿದ ಎಲ್ಲಾ ಘಟಕಗಳನ್ನು ಕೈಗೆತ್ತಿಕೊಂಡು ಪೂರ್ತಿಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಮೂಲ ಸ್ಥಾವರದಿಂದ ದುರ್ಗಾದೇವಿ ಕೆರೆಯವರೆಗೆ 5 ಕಿ.ಮಿ. ಉದ್ದಕ್ಕೆ 406 ಮಿ.ಮಿ. ವ್ಯಾಸದ ಎಂ.ಎಸ್. ಕೊಳವೆ ಮಾರ್ಗ ಜೋಡಣೆ ಕಾಮಗಾರಿಯನ್ನು ಸಹ ಈಗಾಗಲೇ ಕೈಗೆತ್ತಿಕೊಳ್ಳಲಾಗಿದೆ. ಈ ಕೊಳವೆ ಮಾರ್ಗದ ತುಮ್ಮಿನಕಟ್ಟಿ ಹಾಗೂ ರಟ್ಟಿಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ಕೊಳವೆ ಮಾರ್ಗ ಜೋಡಣೆಯ ಕೆಲಸವನ್ನು ಹೊರತುಪಡಿಸಿ ಎಲ್ಲಾ ಕೆಲಸ ಪೂರ್ತಿಗೊಂಡಿದೆ. ತುಮ್ಮಿನಕಟ್ಟಿ ಹಾಗೂ ರಟ್ಟಿಹಳ್ಳಿ ಗ್ರಾಮದ ಜನರು ಕೊಳವೆ ಮಾರ್ಗದ ಜೋಡಣೆಗೆ ಅಡಚಣೆ ಉಂಟು ಮಾಡಿದ್ದರಿಂದ ಕಾಮಗಾರಿಯ ಪ್ರಗತಿ ಕುಂಠಿತವಾಗಿದೆ. ಈ ವಿಷಯವನ್ನು ಜಿಲ್ಲಾಡಳಿತ ಗಮನಕ್ಕೆ ತಂದು ಪೂರ್ಣಗೊಳಿಸಲು ಅಗತ್ಯಕ್ರಮ ಕೈಗೊಳ್ಳಲಾಗುತ್ತಿದೆ.

ಔರಾದ್ ಪಟ್ಟಣಕ್ಕೆ ಒಳ ಕ್ರೀಡಾಂಗಣ ನಿರ್ಮಾಣ

816 (909) ಶ್ರೀ ಪ್ರಭು ಚೌವ್ಹಾಣ್ (ಔರಾದ್) : ಮಾನ್ಯ ಪ್ರವಾಸೋದ್ಯಮ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಔರಾದ್ ಪಟ್ಟಣಕ್ಕೆ ಒಳ ಕ್ರೀಡಾಂಗಣ ಮಂಜೂರು ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಒಳ ಕ್ರೀಡಾಂಗಣಕ್ಕೆ ಸರ್ಕಾರ ಮಂಜೂರು ಮಾಡಿರುವ ಹಣವೆಷ್ಟು? (ಸಂಪೂರ್ಣ ವಿವರ ನೀಡುವುದು);

ಇ) ಯುವಜನ ಮತ್ತು ಕ್ರೀಡಾ ಇಲಾಖೆಯಿಂದ ಔರಾದ್ ಪಟ್ಟಣಕ್ಕೆ ಯಾವ ಯಾವ ಅಭಿವೃದ್ಧಿ, ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ? ಸಂಪೂರ್ಣ ಮಾಹಿತಿಯನ್ನು ನೀಡುವುದು);

ಶ್ರೀ ಜಿ. ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು):

ಅ) ಇಲ್ಲ.

ಆ) ಮೇಲಿನ ಪ್ರಶ್ನೆ (ಅ) ಗೆ ನೀಡಿದ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಇ) ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಕಾಮಗಾರಿಗಾಗಿ 12ನೇ ಹಣಕಾಸಿನ ಆಯೋಗದ ಅನುದಾನದಡಿ ರೂ. 33.00 ಲಕ್ಷಗಳನ್ನು ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ ಕಾಮಗಾರಿ ಪೂರ್ಣಗೊಂಡಿರುತ್ತದೆ.

ಆಶ್ರಯ ಯೋಜನೆಯಡಿಯಲ್ಲಿ ಮನೆಗಳ ಹಂಚಿಕೆ

817 (910) ಶ್ರೀ ಪ್ರಭು ಚೌವ್ಹಾಣ್ (ಔರಾದ್) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಔರಾದ್ ತಾಲ್ಲೂಕಿಗೆ 2008ರಿಂದ ಇಲ್ಲಿಯವರೆಗೆ ರಾಜೀವ್ ಗಾಂಧಿ ವಸತಿ ನಿಗಮದಿಂದ ವಿವಿಧ ಆಶ್ರಯ ಯೋಜನೆಯಡಿಯಲ್ಲಿ ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ;

ಆ) ಹಾಗಿದ್ದಲ್ಲಿ, ಹಂಚಿಕೆ ಮಾಡಲು ಎಷ್ಟು ಬಾಕಿ ಉಳಿದಿರುತ್ತದೆ (ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

2008ರಿಂದ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ವಿವಿಧ ವಸತಿ ಯೋಜನೆಗಳಡಿಯಲ್ಲಿ ಔರಾದ್ ತಾಲ್ಲೂಕಿಗೆ 8497 ಮನೆಗಳನ್ನು ಹಂಚಿಕೆ ಮಾಡಲಾಗಿದೆ.

ಯೋಜನಾವಾರು ಹಂಚಿಕೆ ಮಾಡಲಾದ ಮನೆಗಳ ವಿವರ ಇಂತಿವೆ.

ಮನೆಗಳು:

ಯೊಜನೆಗಳು	ಹಂಚಿಕೆ ಮಾಡಲಾದ ಮನೆಗಳು			ಒಟ್ಟು
	2008–09	2009–10	2010–11	
(ಗ್ರಾಮೀಣ ಆಶ್ರಯ) ಬಸವ ಇಂದಿರಾ ವಸತಿ ಯೋಜನೆ	1350	ಗುರಿ ನಿಗದಿ ಪಡಿಸಿರುವುದಿಲ್ಲ	** 4000	5350
ಗಾಮೀಣ ಅಂಬೇಡ್ಕರ್	321	152	156	629
ಒಟ್ಟು	1671	152	4156	5979
ಇಂದಿರಾ ಆವಾಸ್ ಯೋಜನೆ	911	1607	2518	

** ಬಸವ ಇಂದಿರಾ ವಸತಿ ಯೋಜನೆಯಡಿಯಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಒಟ್ಟು 4000 ಮನೆಗಳ ಗುರಿಯನ್ನು ಹಂಚಿಕೆ ಮಾಡಲಾಗಿದ್ದು ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಮೇಲೆ ತಿಳಿಸಿದಂತೆ ಔರಾದ್ ತಾಲ್ಲೂಕಿಗೆ 2008ರಿಂದ ಇಲ್ಲಿಯವರೆಗೆ ಒಟ್ಟು 4218 ಮನೆಗಳಿಗೆ ಅನುಮೋದನೆ ಪಡೆದುಕೊಂಡು ಒಟ್ಟು 2256 ಮನೆಗಳನ್ನು ಪೂರ್ಣಗೊಳಿಸಲಾಗಿದ್ದು, 1826 ಮನೆಗಳು ಪ್ರಗತಿಯಲ್ಲಿರುತ್ತವೆ. ಇನ್ನು 136 ಮನೆಗಳು ಪ್ರಾರಂಭವಾಗ ಬೇಕಾಗಿದ್ದು, ಬಸವ ಇಂದಿರಾ ವಸತಿ ಯೋಜನೆಯಡಿ 4000 ಫಲಾನುಭವಿಗಳನ್ನು ಗುರುತಿಸಬೇಕಾಗಿರುತ್ತದೆ.

ಸದರಿ ಮನೆಗಳ ವರ್ಷಾವಾರು ವಿವರ ಇಂತಿದೆ.

ಯೋಜನೆಗಳು	ಶ್ರೇಣಿ	ಅನುಮೋದನೆ ಪಡೆದುಕೊಂಡ ಗುರಿ	ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು	ಪ್ರಾರಂಭವಾಗದ ಮನೆಗಳು
(ಗ್ರಾಮೀಣ ಆಶ್ರಯ) ಬಸವ ಇಂದಿರಾ ವಸತಿ ಯೋಜನೆ	2008–09	1259	1009	246	4